# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **272** |
| **ಮಾನ್ಯ ಸದಸ್ಯರ ಹೆಸರು** | : | **ಶ್ರೀ ಎಂ. ನಾಗರಾಜು (ವಿಧಾನ ಸಭಾ ಕ್ಷೇತ್ರ)** |
| **ಉತ್ತರಿಸುವ ದಿನಾಂಕ** | : | **29.01.2026** |
| **ಉತ್ತರಿಸುವ ಸಚಿವರು** | : | **ಗೃಹ ಸಚಿವರು** |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ರಾಜಧಾನಿಯಲ್ಲಿ ದಿನದಿಂದ ದಿನಕ್ಕೆ ಅಪರಾಧಗಳು ಹೆಚ್ಚಾಗುತ್ತಿರುವುದು ನಿಜವೇ; ಜನವರಿ-2025 ರಿಂದ ಡಿಸೆಂಬರ್ 2025 ರವರೆಗೆ ಬೆಂಗಳೂರು ನಗರದಲ್ಲಿ ನಡೆದಿರುವ ಅಪರಾಧಗಳು ಎಷ್ಟು; (ಮಾಹೆಯಾನ ವಿವರ ನೀಡುವುದು) | ರಾಜ್ಯ ರಾಜಧಾನಿ ಬೆಂಗಳೂರು ನಗರದಲ್ಲಿ 2023ನೇ ಸಾಲಿನಲ್ಲಿ 70,002 ಪ್ರಕರಣಗಳು, 2024ನೇ ಸಾಲಿನಲ್ಲಿ 58,930 ಪ್ರಕರಣಗಳು ಮತ್ತು 2025ನೇ ಸಾಲಿನಲ್ಲಿ 57,932 ಪ್ರಕರಣಗಳು ದಾಖಲಾಗಿದ್ದು, ಕಳೆದ 3 ವರ್ಷಗಳಲ್ಲಿ ಬೆಂಗಳೂರು ನಗರದಲ್ಲಿ ದಾಖಲಾಗಿರುವ ಅಪರಾಧ ಪ್ರಕರಣಗಳು ಕಡಿಮೆಯಾಗಿರುತ್ತವೆ.<br><br>ಬೆಂಗಳೂರು ನಗರದಲ್ಲಿ 2025ನೇ ಸಾಲಿನಲ್ಲಿ ದಾಖಲಾದ ಅಪರಾಧ ಪ್ರಕರಣಗಳ ಮಾಹೆವಾರು ಮಾಹಿತಿಯು ಈ ಕೆಳಕಂಡಂತಿದೆ:- |

| ಕ್ರ.ಸಂ | ತಿಂಗಳು | ವರ್ಷ - 2025 |
|---|---|---|
| 1 | ಜನವರಿ | 4214 |
| 2 | ಫೆಬ್ರುವರಿ | 4045 |
| 3 | ಮಾರ್ಚ್ | 4901 |
| 4 | ಏಪ್ರಿಲ್ | 3867 |
| 5 | ಮೇ | 5104 |
| 6 | ಜೂನ್ | 5331 |
| 7 | ಜುಲೈ | 4561 |
| 8 | ಆಗಸ್ಟ್ | 4715 |
| 9 | ಸೆಪ್ಟೆಂಬರ್ | 6276 |
| 10 | ಅಕ್ಟೋಬರ್ | 4991 |
| 11 | ನವೆಂಬರ್ | 4783 |
| 12 | ಡಿಸೆಂಬರ್ | 5144 |
| | **ಒಟ್ಟು** | **57932** |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಒಳಾಡಳಿತ ಇಲಾಖೆಯಲ್ಲಿ ಅತ್ಯಧಿಕ ಪೊಲೀಸ್ ಸಿಬ್ಬಂದಿ ಕರ್ತವ್ಯ ನಿರ್ವಹಿಸುತ್ತಿದ್ದರು ಅಪರಾಧಗಳು ಹೆಚ್ಚಾಗುತ್ತಿರುವುದಕ್ಕೆ ಕಾರಣಗಳೇನು; | **ಕಳೆದ 3 ವರ್ಷಗಳಲ್ಲಿ ದಾಖಲಾಗಿರುವ ಅಪರಾಧ ಪ್ರಕರಣಗಳನ್ನು ವರ್ಷವಾರು ಹೋಲಿಕೆ ಮಾಡುವಾಗ ಇಳಿಮುಖಗೊಂಡಿರುತ್ತವೆ. ಆದರೂ ಅಪರಾಧ ಪ್ರಕರಣಗಳು ಈ ಕೆಳಕಂಡ ಕಾರಣಗಳಿಂದ ಹೆಚ್ಚಾಗುತ್ತಿರುವ ಸಾಧ್ಯತೆ ಇರುತ್ತದೆ:-**<br><br>• ವೇಗವಾಗಿ ಬೆಳೆಯುತ್ತಿರುವ ನಗರೀಕರಣ ಹೆಚ್ಚುತ್ತಿರುವ ಜನಸಂಖ್ಯೆಯಿಂದ ಸಂಘಟಿತ ಅಪರಾಧಗಳು ಹೆಚ್ಚುತ್ತಿವೆ. |

| | | |
|---|---|---|
| | | • ಡಿಜಿಟಲ್ ಸಾಧನಗಳ ಬಳಕೆ, ವ್ಯಾಪಕ ಅಂತರ್ಜಾಲ, ಸಾಮಾಜಿಕ ಜಾಲತಾಣಗಳ ದುರ್ಬಳಕೆಯಿಂದ ಅಪರಾಧಗಳು ಹೆಚ್ಚುತ್ತಿವೆ.<br>• ನಿರುದ್ಯೋಗ ಮತ್ತು ಬಡತನ, ಉದ್ಯೋಗಾವಕಾಶಗಳ ಕೊರತೆ, ಆರ್ಥಿಕ ಅಸಮಾನತೆಗಳಿಂದ ಅಪರಾಧಗಳು ಹೆಚ್ಚುತ್ತಿವೆ.<br>• ಶಿಕ್ಷಣದ ಕೊರತೆ, ಕಾನೂನು ಅರಿವಿನ ಕೊರತೆಯಿಂದ ಅಪರಾಧಗಳು ಹೆಚ್ಚುತ್ತಿವೆ.<br>• ಮದ್ಯ ಮತ್ತು ಮಾದಕ ದ್ರವ್ಯ, ದುಷ್ಚಟಗಳಿಂದ ಅಪರಾಧಗಳು ಹೆಚ್ಚುತ್ತಿವೆ.<br>• ತಂತ್ರಜ್ಞಾನದ ದುರುಪಯೋಗದಿಂದ ಸೈಬರ್ ಅಪರಾಧ ಮತ್ತು ಆನ್‌ಲೈನ್ ಅಪರಾಧಗಳು ಹೆಚ್ಚುತ್ತಿವೆ.<br>• ಕುಟುಂಬ ಮತ್ತು ಸಾಮಾಜಿಕ ಸಮಸ್ಯೆಗಳು – ಕುಟುಂಬ ಕಲಹ, ಪಾಲನೆ ಕೊರತೆ, ಸಾಮಾಜಿಕ ಮೌಲ್ಯಗಳ ಕುಸಿತ.<br>• ಜನಸಂಖ್ಯೆ ವೃದ್ಧಿ ಮತ್ತು ನಗರೀಕರಣ–ನಗರಗಳಲ್ಲಿ ಜನಸಾಂದ್ರತೆ ಹೆಚ್ಚಿದಂತೆ ಅಪರಾಧಗಳ ಸಾಧ್ಯತೆಯೂ ಹೆಚ್ಚುತ್ತದೆ. |
| ಇ | ಇತ್ತೀಚಿನ ದಿನಗಳಲ್ಲಿ ಡಿಜಿಟಲ್ ಅರೆಸ್ಟ್ ಎಂಬ ನಕಲಿ ಜಾಲದಲ್ಲಿ ರಾಜ್ಯದ ಹಲವು ನಾಗರೀಕರು ತಮ್ಮ ಹಣವನ್ನು (ಮೊತ್ತವು **ಲಕ್ಷ/ಕೋಟಿಗಳಲ್ಲಿ**) ಕಳೆದು ಕೊಂಡಿದ್ದಾರೆ ಇಂತಹ ಎಷ್ಟು ಪ್ರಕರಣಗಳು ಕಳೆದ ಒಂದು ವರ್ಷದಲ್ಲಿ ಬೆಳಕಿಗೆ ಬಂದಿವೆ; | ರಾಜ್ಯದಲ್ಲಿ ಕಳೆದ 03 ವರ್ಷಗಳಲ್ಲಿ ಡಿಜಿಟಲ್ ಅರೆಸ್ಟ್ ಎಂಬ ನಕಲಿ ಜಾಲಕ್ಕೆ ಸಂಬಂಧಿಸಿದಂತೆ 2025ನೇ ಸಾಲಿನಲ್ಲಿ ಒಟ್ಟು 335 ಡಿಜಿಟಲ್ ಅರೆಸ್ಟ್ ಪ್ರಕರಣಗಳು ದಾಖಲಾಗಿದ್ದು, ಸದರಿ ಜಾಲದಿಂದಾಗಿ ಒಟ್ಟು ರೂ. 1,65,79,36,780.00ಗಳ ಹಣವನ್ನು ಕಳೆದುಕೊಂಡಿರುತ್ತಾರೆ. |
| ಈ) | ಈ ನಕಲಿ ಜಾಲದ ಬಗ್ಗೆ ಜನಜಾಗೃತಿ ಮೂಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ ಮಾಹಿತಿ ನೀಡುವುದು? | **ಡಿಜಿಟಲ್ ಅರೆಸ್ಟ್ ನಕಲಿ ಜಾಲದ ಬಗ್ಗೆ ಜನ ಜಾಗೃತಿ ಮೂಡಿಸಲು ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ:-**<br>• ಸೈಬರ್ ಅಪರಾಧಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಲ್ಲಿ ಸೈಬರ್ ಸಹಾಯವಾಣಿ 1930 ಕೇಂದ್ರ ಸರ್ಕಾರದಿಂದ ಗೃಹ ಸಚಿವಾಲಯದ **ಎನ್.ಸಿ.ಆರ್.ಪಿ** (National Cyber Crime Reporting Portal) ಬಗ್ಗೆ ಅರಿವು ಮೂಡಿಸಲಾಗುತ್ತಿದೆ.<br>• ಠಾಣಾ ಸರಹದ್ದಿನಲ್ಲಿ ಬರುವಂತಹ ಶಾಲಾ ಕಾಲೇಜುಗಳು, ಹಾಸ್ಟೆಲ್‌ಗಳು, ಸಾರ್ವಜನಿಕ ಜನನಿಬಿಡ ಪ್ರದೇಶಗಳಲ್ಲಿ ಸೈಬರ್ ಕ್ರೈಂ ಬಗ್ಗೆ ಜಾಗೃತಿ |

| | | |
|---|---|---|
| | | ಕಾರ್ಯಕ್ರಮಗಳನ್ನು ಆಯೋಜಿಸಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ.<br>• ದೂರದರ್ಶನ, ಟಿವಿ ಮಾಧ್ಯಮ ಮತ್ತು ಪತ್ರಿಕಾ ಮಾಧ್ಯಮಗಳಲ್ಲಿ ಡಿಜಿಟಲ್ ಅರೆಸ್ಟ್ ಅಪರಾಧಗಳ ಬಗ್ಗೆ ಜಾಹೀರಾತು ನೀಡಲಾಗಿರುತ್ತದೆ.<br>• ಬ್ಯಾಂಕ್‌ಗಳ ನೋಡಲ್ ಅಧಿಕಾರಿಗಳಿಗೆ ಮಾಸಿಕ ಸಭೆಗಳನ್ನು ತೆಗೆದುಕೊಂಡು ಸೈಬರ್ ಪ್ರಕರಣಗಳಲ್ಲಿ ಭಾಗಿಯಾಗುವ ಖಾತೆಗಳ ಮೇಲೆ ನಿಗಾವಹಿಸಿ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿರುತ್ತದೆ.<br>• ಪೊಲೀಸ್ ಠಾಣೆಗಳ ಸರಹದ್ದಿನಲ್ಲಿರುವ ಶಾಲಾ ಕಾಲೇಜುಗಳಿಗೆ ಭೇಟಿ ನೀಡಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತದೆ. ಡಿಸೆಂಬರ್ ತಿಂಗಳಿನಲ್ಲಿ ಸಾರ್ವಜನಿಕ ಸಂಪರ್ಕ ಸಭೆ / ಸಬ್ ಬೀಟ್ ಮೀಟಿಂಗ್ ಅಪರಾಧ ತಡೆ ಮಾಸಾಚರಣೆಯಲ್ಲಿ ಪ್ರೊಜೆಕ್ಟರ್/ಬ್ಯಾನರ್/ಕರ ಪತ್ರಗಳ ಹಂಚಿಕೆ ಮೂಲಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಾರ್ವಜನಿಕರಿಗೆ ಅರಿವು ಮೂಡಿಸಲಾಗುತ್ತಿದೆ.<br>• ಸಾರ್ವಜನಿಕ ಸ್ಥಳಗಳಲ್ಲಿ ಸೈಬರ್ ವಂಚನೆ ಅಪರಾಧಗಳ ಬಗ್ಗೆ ಮೋಸ ಹೋಗದಂತೆ ಜಾಗೃತಿ ಮೂಡಿಸಲಾಗುತ್ತಿದೆ.<br>• ಸಾರ್ವಜನಿಕರಿಗೆ ಸೈಬರ್ ಕ್ರೈಂ ಕುರಿತು ಅರಿವು ಮೂಡಿಸಲು ಟಿ.ವಿ ಮಾಧ್ಯಮ, ದಿನಪತ್ರಿಕೆ, ಫೇಸ್‌ಬುಕ್, ಸಾಮಾಜಿಕ ಜಾಲತಾಣಗಳ ಮೂಲಕ ಹಾಗೂ ಬ್ಯಾಂಕ್ ಅಧಿಕಾರಿಗಳ ಸಹಭಾಗಿತ್ವದಲ್ಲಿ ಮತ್ತು ಪೊಲೀಸ್ ಇಲಾಖೆಯ ಟ್ವಿಟರ್ ಖಾತೆಯ ಮೂಲಕ ಜನರಿಗೆ ಸೈಬರ್ ಅಪರಾಧಗಳ ಕುರಿತು ಮುಂಜಾಗೃತ ಕ್ರಮಗಳ ಬಗ್ಗೆ ಮಾಹಿತಿಯನ್ನು ನೀಡಲಾಗುತ್ತಿದೆ. |

**ಸಂಖ್ಯೆ: ಹೆಚ್‌ಡಿ 17 ಪಿಸಿಕ್ಯೂ 2026**

**(ಡಾ: ಜಿ. ಪರಮೇಶ್ವರ)**
**ಗೃಹ ಸಚಿವರು**